ಹೀಗೆ ಓಡಿಹೋದ ದೇವಿ ಇಲ್ಲಿಗೆ ಬಂದುದಾದರೂ ಹೇಗೆ? ಎಂಬುದು ನಮಗಿಬ್ಬರಿಗೂ ಪ್ರಶ್ನೆಯಾಗಿಯೇ ಉಳಿಯಿತು. ನನಗಿಂತಲೂ ಹೆಚ್ಚಾಗಿ ಲೋರೆಗೆ ಈ ಪ್ರಶ್ನೆಗೆ ಉತ್ತರ ಬೇಕಿತ್ತು. ಹಾಗಾಗಿ ನಾವು ಆ ದಿನವನ್ನು ಅಲ್ಲಿಯೇ ಕಳೆದು, ಮರುದಿನ ಅವಳನ್ನೊಮ್ಮೆ ಭೇಟಿಯಾಗಿಯೇ ಹೋಗುವುದೆಂದು ತೀರ್ಮಾನಿಸಿದೆವು.

ದೇವಿ ನಮ್ಮೊಂದಿಗೆ ಮಾತನಾಡಲು ಮೊದಲು ಒಪ್ಪಲಿಲ್ಲ. ದರ್ಶನದ ವೇಳೆಯಲ್ಲಲ್ಲದೇ ಅವಳು ತನ್ನ ಮನೆಯೊಳಗಿಂದ ಹೊರಬರುತ್ತಿದ್ದುದೇ ಅಪರೂಪ. ಅಂತೂ ನಾವು ಅರ್ಚಕರ ಮೂಲಕ ಒತ್ತಾಯಿಸಿದಾಗ ಭೇಟಿಗೆ ಅನುಮತಿ ದೊರಕಿತು. ದೇವಿಗೆ ನನ್ನ ಗುರುತು ಹತ್ತಿತೋ ಇಲ್ಲವೋ ತಿಳಿಯಲಿಲ್ಲ. ಆದರವಳು ಮರಾಠಿಯಲ್ಲಿಯೇ ಮಾತನಾಡಿದಳು. ನನಗೆ ಮಾತ್ರ ಅವಳನ್ನು ಹತ್ತಿರದಿಂದ ಕಂಡೊಡನೆ ಇವಳು ಅವಳೇ ಎಂಬುದು ಖಾತ್ರಿಯಾಗಿತ್ತು. "ದೇವಿ, ಇದೇನೆ?" ಎಂದೆ. ದೇವಿ ತಾನು ಕುಳಿತಲ್ಲಿಂದ ಎದ್ದುಹೋಗಿ ಬಾಗಿಲು ಮುಚ್ಚಿದಳು. ತನ್ನ ಕತೆ ಹೇಳತೊಡಗಿದಳು, "ಅವ ಇಂಥವ ಅಂತ ಗೊತ್ತಿರಲಿಲ್ಲ. ಮಾತಲ್ಲೇ ಮೋಡಿ ಮಾಡಿ ನನ್ನ ಒಳಗೆ ಹಾಕಿಬಿಟ್ಟ. ಸನ್ನೆಯಲ್ಲೇ ಸ್ವರ್ಗ ತೋರಿಸಿ ನನ್ನ ಹಾರಿಸಿಕೊಂಡು ಬಂದ. ಒಂದು ತಿಂಗಳು ಅಲ್ಲೆಲ್ಲೋ ಮನೆಮಾಡಿ ಉಳಿದೆವು. ಮತ್ತೊಂದಿನ ಎಲ್ಲಿಗೋ ಕರೆದೊಯ್ಯುವ ನೆಪದಲ್ಲಿ ನನ್ನ ದೊಡ್ಡ ಮನೆಯೊಂದರೊಳಗೆ ಸೇರಿಸಿ ಪರಾರಿಯಾಗಿಬಿಟ್ಟ. ನರಕದ ಬಾಳು ಅದು. ಆದರೇನು ಮಾಡ್ತೀಯಾ? ಒಳಗೆ ಹೋಗೋಕೆ ಮಾತ್ರವೇ ದಾರಿ ಅಲ್ಲಿ. ಹೊರಗೆ ಬರೋಕಾಗೋದೇ ಇಲ್ಲ. ನಾನು ಹಾಂಗೆ ಕುಳಿತು ಯೋಚನೆ ಮಾಡ್ದೆ. ಯಾರನ್ನು ನೆನಸ್ಕೊಳ್ಳಿ ಹೇಳು? ನಮ್ಮೂರ ಮಾರಿಯಮ್ಮನ ಹೆಸರೇಳ್ತ ಕೂತೇಬಿಟ್ಟೆ. ಬಿಟ್ಟಾರೆ ಅವರು? ಬ್ಯಾಡ ಅಂದ್ರೂ ಬಿಕನಾಸಿಯೊಬ್ಬನ್ನ ನನ್ನ ಮಂಚಕ್ಕೆ ಕಳಿಸೇಬುಟ್ರು. ಮಾರಿಯಮ್ಮ ಬಿಟ್ಟಾಳೆ? ಬಂದ್ಲು ನೋಡು ನನ್ನ ಮೈಮೇಲೆ, ಇದ್ದೋರನ್ನೆಲ್ಲ ನೆಲಕ್ಕಪ್ಪಳಿಸಿಯೇಬುಟ್ಲು. ಏನು ಕಡಿಮೆ ಸಿಕ್ಸೆ ಕೊಟ್ರಾ? ಏನು ಮಾಡಿದರೂ ಮಾರಮ್ಮ ನನ್ನ ಮೈಮುಟ್ಟೋಕೆ ಮಾತ್ರ ಬಿಡಲಿಲ್ಲ ಕಾಣು. ಅವರಿಗೂ ಬ್ಯಾಜಾರಾಗಿ ಬೀದಿಲಿ ಬಿಟ್ಟು ಹೋದ್ರು. ಇಲ್ಲಿ ಕರೆದ್ಲು ತಾಯಿ, ಬಂದು ಸೇರ್ಕಂಡಿದ್ದೀನಿ. ಆ ದೇವಿ ಹೇಳಿದಂಗೆ ಹೇಳೊದು, ಅವಳು ನಡೆಸಿದಂಗೆ ನಡೆಯೋದು." ಎಂದು ಮುಗಿಸಿದಳು. ಜೊತೆಯಲ್ಲಿ ತನ್ನನ್ನು ಒಗ್ಗಿಸಲು ಮೈಕೈಗೆಲ್ಲ ಬರೆಹಾಕಿದ ಗುರುತುಗಳನ್ನು ತೋರಿಸಿದಳು.

ಅವಳು ತಂದಿಟ್ಟ ಬಾಳೆಹಣ್ಣು, ಹಾಲು ಸ್ವೀಕರಿಸಿ, ಬರುವೆನೆಂದು ಹೊರಟ ನನ್ನ ಕೈಗೆ ಪುಟ್ಟ ಚೀಲವೊಂದನ್ನು ನೀಡಿದಳು. "ಊರಿಗೆ ಹೋಗುವಾಗ ನನ್ನ ತಂಗಿಯರಿಗೆ ಏನಾದರೂ ತಕೊಂಡು ಹೋಗು. ಮೂವರಿಗೀಗ ಮದುವೆಯ ಪ್ರಾಯ ಇರಬಹುದು. ನಿಂಗೆ ಗೊತ್ತಾದ್ರೆ ತಿಳಿಸು. ಮದುವೆಗಂತ ಒಂದಿಷ್ಟು ಹಣ ತೆಗೆದಿಟ್ಟಿದ್ದೇನೆ. ನಾನಿರುವ ಜಾಗ ಮಾತ್ರ ಹೇಳಬೇಡ. ಅವರ ಬದುಕು ಅವರದ್ದು, ನನ್ನ ಬದುಕು ನಂದು. ನಾನು ನಂಬಿದ ತಾಯ ಸೇವೆಯಲ್ಲಿ ನನ್ನ ಜೀವನ ಕಳೆದೋಗ್ಲಿ" ಎಂದಳು.

ನಾನು ಹೊರಬಂದಾಗ ಲೋರೆ ಒಂದು ಇಡಿಯ ಬಳಪವನ್ನು ಹಿಡಿದು ನನ್ನನ್ನು ಸ್ವಾಗತಿಸಿದ!


## ಸುಧಾ ಆಡುಕಳ

ಮೂಲತಃ ಹೊನ್ನಾವರ ತಾಲೂಕಿನ ಆಡುಕಳದವರು. ಪ್ರಸ್ತುತ ಉಡುಪಿಯ ಬಾಲಕಿಯರ ಸ. ಪ. ಪೂ. ಕಾಲೇಜಿನಲ್ಲಿ ಗಣಿತ ಉಪನ್ಯಾಸಕರು. 'ರಾಧಾ', 'ಮಕ್ಕಳ ರವೀಂದ್ರ', 'ಚಿತ್ರಾ', 'ನೃತ್ಯಗಾಥಾ' ಮೊದಲಾದ ನಾಟಕಗಳನ್ನು ರಚಿಸಿದ್ದಾರೆ. 'ಬಕುಲದ ಬಾಗಿಲಿನಿಂದ' ಎಂಬ ಸ್ತ್ರೀಕೇಂದ್ರಿತ ಅಂಕಣ ಬರಹಗಳ ಪುಸ್ತಕವನ್ನು ಬಹುರೂಪಿ ಪ್ರಕಾಶನ ಪ್ರಕಟಿಸಿದೆ.